ಮದುವೆಕ್ಕಿಂತ ಪೂರ್ವದಲ್ಲಿ ಬೆಂಗಳೂರಿನಲ್ಲಿಯೇ ನೌಕರಿ ಮಾಡುತ್ತಿದ್ದ ಎಂದರೆ ಸರಿ. ನನ್ನ ಅಣ್ಣ ಬ್ಯಾಚುಲರ್ ಕಾರಣ ಆತ ನಮ್ಮ ಜೊತೆಯಲ್ಲಿ ಇರುತ್ತಿದ್ದ ಎಂದರೆ ಸರಿಯಲ್ಲ. ಆತ ಬೇರೆ ರೂಂ ಮಾಡಿಕೊಂಡು ಇದ್ದ. ನನ್ನ ಅಣ್ಣ ಬೇರೆ ರೂಂ ಮಾಡಿಕೊಂಡ ಇದ್ದ ಎಂಬುವುದರ ಸಲುವಾಗಿ ಯಾವುದೇ ದಾಖಲೆ ಹಾಜರುಹಪಡಿಸಿರುವುದಿಲ್ಲ, ಮುಂದೆ ಹಾಜರುಪಡಿಸುತ್ತೇನೆ.

ನನ್ನ ಅರ್ಜಿಯಲ್ಲಿ ಹೇಳಿದಂತೆ ಎದುರುದಾರ ಸಣ್ಣ-ಪುಟ್ಟ ವಿಷಯಗಳಿಗೆ ಅಂದರೆ, ನನ್ನ ತಾಯಿ ಚೆನ್ನಾಗಿ ಇಲ್ಲ, ನನ್ನ ಅಣ್ಣ ರೌಡಿ ತರ ಇರುತ್ತಾನೆ ಅಂತ ಹಾಗೂ ನಾನು ಅಡುಗೆ ಮಾಡಿದಾಗ, ಸುಖಾ ಸಮ್ಮನೆ ಆರೋಪ ಮಾಡುತ್ತಿದ್ದ. ಎದುರುದಾರನ ತಾಯಿ ಮಹಾದೇವಿ ರವರು ಮಾನಸಿಕ ಅಶ್ವಸ್ಥಳು ಇದ್ದು ಹಾಗೂ ದೈಹಿಕವಾಗಿ ಚೆನ್ನಾಗಿ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಅತ್ತೆಯ ಬಗ್ಗೆ ಸಾಕಷ್ಟು ಬಾರಿ ಹೋಗಿ ಅವರ ಬಗ್ಗೆ ವಿಚಾರ ಮಾರುತ್ತೇನೆ ಹಾಗೂ ಕೆಲವೂಂದು ಬಾರಿ ಬೆಂಗಳೂರಿನ ಯುನೈಟೆಡ್ ಆಸ್ಪತ್ರೆಗೆ ಹೋಗಿರುತ್ತೇನೆ. ಎದುರುದಾರನ ತಂದೆ-ತಾಯಿಗೆ ಆತ ಒಬ್ಬನೆ ಗಂಡು ಮಗ ಎಂದರೆ ಸರಿ. ನನ್ನ ಮಾವ ಸುಭಾಶ್ ನಿವೃತ್ತ ನೌಕರ ಎಂದರೆ ಸರಿ. ಅವರಿಗೂ ಕೂಡಾ ವಯಸ್ಸಾಗಿದೆ ಎಂದರೆ ಸರಿ. ಎದುರುದಾರನ ತಂದೆ-ತಾಯಿ ಆತನ ಮೇಲೆಯೇ ಅವಲಿಂಬಿತರಾಗಿರುತ್ತಾರೆ ಎಂದರೆ ಸರಿ. ಎದುರುದಾರ ತನ್ನ ತಂದೆ-ತಾಯಿಗೆ ಆರೋಗ್ಯ ಸರಿಯಿಲ್ಲದಾಗ ಆತ ಬೆಂಗಳೂರಿನಿಂದ ಬಂದು ಹೋಗಿ ಮಾಡುತ್ತಾನೆ ಎಂದರೆ ಸರಿ. ಅದಕ್ಕೆ ನಾನು ಅಕ್ಷಪಣೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಅಣ್ಣ ಎದುರುದಾರನಿಗೆ ಕೆಲವೊಂಂದು ಬಾರಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಅಣ್ಣ ತನ್ನ ಸಹಚರರನ್ನು ಕಳುಹಿಸಿ ಹಲ್ಲೆ ಮಾಡಲು ಕೂಡಾ ಪ್ರಯತ್ನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಬಗ್ಗೆ ಎದುರುದಾರ ಬೆಂಗಳೂರು ಕಮಿಷನರ್ ರವರಿಗೆ ಒಂದು ದೂರು ಕೂಡಾ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದೂರಿನಲ್ಲಿ ನನ್ನ ಹೆಸರು ಕೂಡಾ ಕಾಣಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಎದುರುದಾರ ಮತ್ತು ಆತನ ತಂದೆ-

ತಾಯಿಗಳ ವಿರುದ್ದ ಒಂದು ಬಾರಿ ದೂರು ಕೊಟ್ಟಿದ್ದೆ ಆಗ ಪೊಲೀಸರು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಬೇಡ ಮಹಿಳಾ ಸ್ವಾಂತನ ಕೇಂದ್ರಕ್ಕೆ ಕಳುಹಿಸಿಕೊಡುತ್ತೇವೆ, ಅಲ್ಲಿ ಬಗೆಹರಿಸಿಕೊಳ್ಳಿ ಎಂದು, ನಮಗೆ ನಿರ್ದೇಶನ ನೀಡಿರುತ್ತಾರೆ. ನಾನು ದೂರು ಕೊಟ್ಟ ನಂತರ ಎದುರುದಾರ ಮತ್ತು ಆತನ ತಂದೆ-ತಾಯಿಗಳನ್ನು ಕರೆಯಿಸಿದ್ದರು ಎಂದರೆ ಸರಿ. ಪೊಲೀಸರು ನನ್ನ ಸಮಕ್ಷಮ ಎದುರುದಾರಿನಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅವಮಾನ ಮಾಡುವುದನ್ನು ನೋಡಿ ನಾನು ನಗುತ್ತಿದ್ದೆ ಎಂದರೆ ಸರಿಯಲ್ಲ.

ಕಲಬುರಗಿಯಲ್ಲಿ ನನ್ನ ಹೆಸರಿನ ಲ್ಲಿ ಒಂದು ಸೈಟ್ ಇದೆ ಎಂರೆ ಸರಿ. ಸದರಿ ಸೈಟ್‌ನ್ನು ಖರೀದಿ ಮಾಡಲು ಎದುರುದಾರ ನನಗೆ ಹಣ ಕೊಟ್ಟಿಲ್ಲ, ನಾನೇ ವೈಯಕ್ತಿಕ ಸಾಲ ಪಡೆದುಕೊಂಡು ಖರೀದಿಸಿರುತ್ತೇನೆ. ಎದುರುದಾರ ನನ್ನ ಖಾತೆಗೆ ಸದರಿ ಸೈಟ್‌ನ್ನು ಖರೀದಿಸಲು ಹಣ ವರ್ಗಾವಣೆ ಮಾಡಿದ್ದ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಮೊದಲು ಆತನ ಖಾತೆಗೆ ಹಾಕಿದ್ದೇ, ನಂತರ ಅವರು ನನ್ನ ಖಾತೆಗೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರನ ಖಾತೆಗೆ ಏಕೆ ಹಣ ಹಾಕಿದ್ದಿರೀ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ತಿಂಗಳು ನನ್ನ ವೇತನವನ್ನು ಆತನ ಖಾತೆಗೆ ಹಾಕಬೇಕೆಂದು ಎದುರುದಾರ ನನಗೆ ಹೇಳಿದ್ದ. ಸುಮಾರು 8-9 ತಿಂಗಳು ನಾನು ಆತನ ಖಾತೆಗೆ ನಾನು ನನ್ನ ವೇತನವನ್ನು ಹಾಕಿರುತ್ತೇನೆ, ಆದರೆ ನನಗೆ ಎಷ್ಟು ಹಾಕಿರುತ್ತೇನೆ ಎಂದು ನೆನಪು ಇಲ್ಲ.

ಎದುರುದಾರ ನನ್ನ ಖಾತೆಗೆ ಒಮ್ಮೆಲೆ ರೂ. 60,000/- ಹಣವನ್ನು ಸೈಟ್ ಖರೀದಿಗೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ರೂ. 20,000/- ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಅದೇ ರೀತಿ ಎದುರುದಾರ ನನಗೆ ಸುಮಾರು ರೂ.5 ಲಕ್ಷ ಹಣವನ್ನು ನಗದು ರೂಪವಾಗಿ ಕೈಯಲ್ಲಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ನಾನು ಮತ್ತು ಎದುರುದಾರ ಜಂಟಿ ಖಾತೆ ತೆಗೆದಿದ್ದೇವು ಎಂದು ಹೇಳಿರುವುದಿಲ್ಲ. ಮದುವೆಯಾದ ನಂತರ ನಾನು

ಮತ್ತು ಎದುರುದಾರ ಸುಮಾರು 3-4 ತಿಂಗಳ ಕಾಲ ಚೆನ್ನಾಗಿ ಇದ್ದೇವು. ಬೆಂಗಳೂರಿನಲ್ಲಿದ್ದಾಗ ನನ್ನ ಮತ್ತು ಎದುರುದಾರ ಮಧ್ಯ ವಿವಾದ ಪ್ರಾರಂಭವಾಯಿತು, ಏಕೆಂದರೆ ನನ್ನ ಮಾವ ಬಂದು ನನ್ನ ಸಂಭಳ ಕೇಳಿದಾ ಆವಾಗಿನಿಂದ ಎದುರುದಾರನ ನಡತೆಯಲ್ಲಿ ಬದಲಾವಣೆಯಾಗಿರುತ್ತದೆ. ನನ್ನ ಅರ್ಜಿಯಲ್ಲಿ ನನ್ನ ಮಾವ ಹಣ ಕೇಳಿದ ಬಗ್ಗೆ ಬರೆದಿರುತ್ತೇನೆ. ನನ್ನ ಮಾವ ನಿವೃತ್ತ ನೌಕರುದಾರ ಆತನಿಗೆ ನಮ್ಮಿಂದ ಹಣ ಪಡೆಯುವ ಅವಶ್ಯಕತೆ ಇಲ್ಲ, ನಾನು ವಿನಾಕಾರಣ ಸುಳ್ಳು ಆರೋಪ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಬೆಂಗಳೂರಿಗೆ ನನ್ನ ಮಾವ ಮಾತ್ರ ಬಂದಿದ್ದ, ನನ್ನ ಅತ್ತೆ ಬಂದಿರಲಿಲ್ಲ. ಸುಮಾರು 3 ತಿಂಗಳಲ್ಲಿ ನನ್ನ ಮಾವ ಸುಮಾರು 2 ಬಾರಿ ಬಂದಿದ್ದರು. 2 ಬಾರಿ ಕೂಡಾ ನನ್ನ ಮಾವ ಒಬ್ಬರೆ ಬಂದಿದ್ದರು. ಆರು ತಿಂಗಳ ನಂತರ ನಾವಿಬ್ಬರು ಜೊತೆಯಲ್ಲಿದ್ದಾಗ ನನ್ನ ಅತ್ತೆ ಮಾವ ಬಂದಿದ್ದರು. ನಾವು ಸುಮಾರು 1 ವರೆ ವರ್ಷಗಳ ಕಾಲ ಜೊತೆಯಲ್ಲಿದ್ದಾಗ ನನ್ನ ಮಾವ ಸುಮಾರು 5-6 ಬಾರಿ ಬಂದಿದ್ದರು. ನಾನು ಪೊಲೀಸರಿಗೆ ದೂರು ಕೊಟ್ಟಾಗ ನನ್ನ ಮಾವನ ಮೇಲೆ ನಾನು ಆರೋಪ ಮಾಡಿಲ್ಲ. ನನ್ನ ಮತ್ತು ಎದುರುದಾರನ ಮಧ್ಯ ಇರುವ ವಿವಾದ ಸಲುವಾಗಿ ಸುಮಾರು 5-6 ಬಾರಿ ಪಂಚಾಯತಿ ಆಗಿರುತ್ತವೆ.

ಮೊದಲು ಬಾರಿ ಕಲಬುರಗಿಯಲ್ಲಿ ನಮ್ಮ ಸಂಬಂಧಿಕರಾದ ಮುಳಗೆ ರವರ ಮನೆಯಲ್ಲಿ ಪಂಚಾಯತಿ ಆಗಿರುತ್ತದೆ. 2ನೇ ಪಂಚಾಯತಿ ಗೋದುತಾಯಿ ನಗರ ಎದುರುದಾರನ ಸಂಬಂಧಿಕರ ಮನೆಯಲ್ಲಿ ಆಗಿರುತ್ತದೆ. 3ನೇ ಪಂಚಾಯತಿ ಆಳಂದದ ಘಂಟಿ ರವರ ಮನೆಯಲ್ಲಿ ಆಗಿರುತ್ತದೆ. ಕೊನೆಯ ಬಾರಿ ಪಂಚಾಯತಿ ಆಳಂದದ ಹೋಟೇಲ್‌ದಲ್ಲಿ ಆಗಿರುತ್ತದೆ, ಸದರಿ ಹೋಟೇಲ್ ಹೆಸರು ನನಗೆ ಗೊತ್ತಿಲ್ಲ. ಕೊನೆಯ ಪಂಚಾಯತಿಯಲ್ಲಿ ನಮ್ಮ ಕಡೆಯಿಂದ ನಮ್ಮ ದೊಡ್ಡಪ್ಪ ಸಿದ್ದರಾಮಪ್ಪ ಮುಕ್ತಾ ಹಾಗೂ ನಮ್ಮ ಸಂಬಂಧಿಕರು ವೀರಣ್ಣ ಹೊನಶೆಟ್ಟಿರವರು ಇದ್ದರು, ಎದುರುದಾರನ

ಕಡೆಯಿಂದ ಬಹಳಷ್ಟು ಅಂದರೆ 20 ಜನ ಬಂದಿದ್ದರು ಅವರ ಹೆಸರು ನನಗೆ ಗೊತ್ತಿಲ್ಲ.

ಸದರಿ ಪಂಚಾಯತಿಯಲ್ಲಿ ನಾನು ಜೊತೆಗೆ ಇರುತ್ತೇನೆ ಎಂದು ಹೇಳಿರುತ್ತೇನೆ, ಆದರೆ ಎದುರುದಾರ ಆಗುವುದಿಲ್ಲ ಎಂದು ಎದ್ದು ಹೊರಟು ಹೋಗಿರುತ್ತಾರೆ. ಎದುರುದಾರನಿಗೆ ನಾನು ಸಂಸಾರ ಮಾಡಲು ಅವಕಾಶ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ಸದ್ಯ ಮಕ್ಕಳು ಬೇಡ ಮುಂದೆ ನೋಡೋಣಾ ಎಂದು ತಿರಸ್ಕಾರ ಭಾವನೆಯಿಂದ ಆತನನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಎದುರುದಾರ ಪರ ವಕೀಲರು ಮುಂದುವೆರದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**